ಪಡೆಯುವುದು ಬುದ್ಧಿವಂತರ ಲಕ್ಷಣ . ಕೆಲವರು ಕಷ್ಟಪಟ್ಟು ಕೆಲಸ ಮಾಡುವುದಲ್ಲದೆ, ಬುದ್ಧಿವಂತಿಕೆಯಿಂದ ಕೆಲಸ ಮಾಡಿ ಬಂದ ಅವಕಾಶವನ್ನು ದಕ್ಕಿಸಿಕೊಳ್ಳುತ್ತಾರೆ.

ಅವಕಾಶವೆನ್ನುವುದು ಮಂತ್ರದಂಡವಲ್ಲ. ಸಂಕಲ್ಪ ಶಕ್ತಿ, ಕಠಿಣ ಪರಿಶ್ರಮ, ಸಾಮರ್ಥ್ಯ ಹಾಗೂ ನಮ್ಮಲ್ಲಿ ನಮಗೆ ಭರವಸೆಯಿದ್ದಲ್ಲಿ ಯಶಸ್ಸು ನಮ್ಮನ್ನು ಹುಡುಕಿಕೊಂಡು ಬರುತ್ತದೆ. ಮದರ್ ಥೆರೆಸಾ ಹೇಳಿರುವಂತೆ, ಬದುಕೇ ಒಂದು ಅವಕಾಶ. ಮೊದಲು ಅದರ ಪ್ರಯೋಜನವನ್ನು ಪಡೆದುಕೊಳ್ಳೋಣ. ಜೀವನದ ಸಾಫಲ್ಯವು ಆರೋಗ್ಯವಂತ ಮನಸ್ಸು ಮತ್ತು ದೇಹದಲ್ಲಿದೆ. ಕೆಲವರಿಗೆ ಜೀವನದ ದಾರಿಯಲ್ಲಿ ಬಹಳಷ್ಟು ದೂರ ನಡೆದ ಮೇಲೆಯೇ ಬದುಕಿನ ಅರ್ಥ ತಿಳಿಯುತ್ತದೆ. ಆದರೆ, ಆಗ ತುಂಬ ತಡವಾಗಿರುತ್ತದೆ. ಇನ್ನು ಕೆಲವರು ಬಾಲ್ಯದಲ್ಲಿ ಅಥವಾ ತಾರುಣ್ಯದಲ್ಲಿ ತಮ್ಮ ಗುರಿಯನ್ನು ನಿಗದಿ ಪಡಿಸಿಕೊಂಡಿರುತ್ತಾರೆ. ಆ ಗುರಿಯನ್ನು ತಲುಪಲು ಸಿಗುವ ದಾರಿಗಳ ಬಗ್ಗೆ ಕೂಲಂಕಷ ಆಲೋಚಿಸುತ್ತಾರೆ. ದಿನದ ಪ್ರತಿಯೊಂದು ನಿಮಿಷ, ಗಂಟೆಯಲ್ಲೂ ಗುರಿ ತಲುಪುವ ವಿಧಾನದ ಬಗ್ಗೆ ಚಿಂತಿಸುತ್ತಾರೆ.

ಬರೀ ಆಸೆಗಳ ಮೇಲೆ ಬದುಕುವುದು ಜೀವನವಲ್ಲ. ಜೀವನಕ್ಕೆ ಅರ್ಥ ಇದೆಯೆಂದು ತಿಳಿದು, ಒಂದು ಗುರಿಯನ್ನು ಗೊತ್ತುಮಾಡಿಕೊಳ್ಳಬೇಕು. ಗುರಿಯನ್ನು ಕಣ್ಣೆದುರು ಇರಿಸಿಕೊಂಡವನಿಗೆ ಜೀವನದ ಅರ್ಥವನ್ನು ಹುಡುಕಿಕೊಳ್ಳುವುದು ಸುಲಭವೆನಿಸುತ್ತದೆ. ಪ್ರತಿಯೊಬ್ಬನ ಜೀವನದಲ್ಲೂ ಸ್ಪರ್ಧೆ ಇದ್ದೇ ಇರುತ್ತದೆ. ಬಹುಮಾನವನ್ನು ಮನುಷ್ಯನು ಹೋರಾಟ ಮಾಡಿಯೇ ಪಡೆದುಕೊಳ್ಳಬೇಕು. ಸಾಹಸ ಮನೋಭಾವ ಇಲ್ಲದಿದ್ದರೆ ಬಹುಮಾನ ಸಿಗುವುದು ಕಷ್ಟ.

ಮನುಷ್ಯ ಜೀವನಕ್ಕೆ ಅದರಷ್ಟಕ್ಕೇ ಯಾವ ಅರ್ಥವೂ ಇಲ್ಲ. ಮನುಷ್ಯನು ಇನ್ನೊಬ್ಬರೊಂದಿಗೆ ಹೊಂದಿಕೊಂಡು ಬದುಕಿದಾಗಲೇ ಅವನ ಜೀವನಕ್ಕೆ ಅರ್ಥ ಇದೆ. ಲಕ್ಷಾಂತರ ಉದ್ಯೋಗಗಳಿವೆ, ಪ್ರತಿಯೊಬ್ಬರೂ ತಮ್ಮ ವಿದ್ಯಾಭ್ಯಾಸ, ವಯಸ್ಸು, ಪ್ರತಿಭೆಗೆ ಅನುಗುಣವಾಗಿ ಸಮಯ ವ್ಯರ್ಥ ಮಾಡದೆ ಶ್ರಮ ಪಟ್ಟರೆ ಕೆಲಸ ಸಿಗುತ್ತದೆ. ಅವನ ವ್ಯಕ್ತಿಗತ ಜೀವನದೊಂದಿಗೆ ನಮ್ಮ ದೇಶವೂ ಪ್ರಗತಿ ಹೊಂದುತ್ತದೆ.

'ಪ್ರತಿಯೊಂದು ಆತ್ಮವೂ ದಿವ್ಯವಾದುದು' ಎಂಬ ಮಾತಿದೆ. ಈ ಜಗತ್ತಿನಲ್ಲಿ ಹುಟ್ಟಿ, ಬೆಳೆಯುವ ಪ್ರತಿಯೊಬ್ಬ ಪುರುಷ, ಮಹಿಳೆಯರಲ್ಲಿಯೂ ಹುಟ್ಟಿನಿಂದಲೇ ಬರುವ, ಪರಿಸರದ ಪ್ರಭಾವದಿಂದ ವೃದ್ಧಿಯಾಗುವ ಶಕ್ತಿ ಸಾಮರ್ಥ್ಯಗಳಿವೆ. ಅವು ಜಾತಿ, ಮತ, ಪಂಥ, ಪಂಗಡ, ಪಕ್ಷ, ಲಿಂಗ ಬೇಧವಿಲ್ಲದೆ ನೀಡಲ್ಪಟ್ಟಿವೆ. ಪ್ರತಿಯೊಬ್ಬ ವ್ಯಕ್ತಿಯಲ್ಲಿ ಅನೇಕ ಅಮೂಲ್ಯ ಶಕ್ತಿ ಸಾಮರ್ಥ್ಯಗಳಿವೆ. ಪ್ರಾಣಿ, ಪಕ್ಷಿಗಳಿಗಿಂತಲೂ ಮಿಗಿಲಾದ ಅಗಾಧ ಪ್ರಮಾಣದ ಬುದ್ಧಿಶಕ್ತಿ, ಆಲೋಚನಾಶಕ್ತಿ ಮತ್ತು ವಾಕ್ ಶಕ್ತಿಗಳಿವೆ. ಈ ವಿಶಿಷ್ಟ ಶಕ್ತಿ ಸಾಮರ್ಥ್ಯಗಳನ್ನು ಸರ್ವಾಂಗೀಣ ಸುಂದರ ವ್ಯಕ್ತಿತ್ವದ ನಿರ್ಮಾಣಕ್ಕೆ ಸದ್ಬಳಕೆ ಮಾಡಿಕೊಂಡಿದ್ದೇ ಆದರೆ ಅದ್ಭುತ ಸಾಧನೆಗಳು ಸಾಧ್ಯವಾಗುತ್ತವೆ.

ಸೂಫಿ ಕತೆಯೊಂದಿದೆ. ಒಂದಾನೊಂದು ಕಾಲದಲ್ಲಿ ಅಮ್ಮೈನ್ ಎಂಬ ಒಬ್ಬ ಒಳ್ಳೆಯ ವ್ಯಕ್ತಿಯಿದ್ದ, ಬಡವರಿಗೆ ಸಹಾಯ ಮಾಡುತ್ತಿದ್ದ, ದಾನ-ಧರ್ಮ ಮಾಡುತ್ತಿದ್ದ, ಎಲ್ಲ ಪ್ರಾಣಿಗಳನ್ನೂ ಪ್ರೀತಿಸುತ್ತಿದ್ದ. ಅನೇಕ ಸಲ ಇತರರಿಗಾಗಿ ಅನಿರೀಕ್ಷಿತ ಕಷ್ಟ ಪರಿಸ್ಥಿತಿಗಳನ್ನು ತಾಳ್ಮೆಯಿಂದ ಎದುರಿಸುತ್ತಿದ್ದ. ಜ್ಞಾನವನ್ನು ಅರಸುತ್ತಾ ಯಾತ್ರೆಗಳನ್ನು ಮಾಡುತ್ತಿದ್ದ. ಅನುಕರಣಯೋಗ್ಯ ನಡೆನುಡಿಗಳೂ ವಿನಯವೂ ಅವನಲ್ಲಿದ್ದವು. ಇದರಿಂದಾಗಿ ವಿವೇಕಿ, ಉತ್ತಮ ನಾಗರಿಕ ಎಂದೇ ಅವನು ಖ್ಯಾತನಾಗಿದ್ದ. ಅವನಲ್ಲಿ ಏನೆಲ್ಲಾ ಒಳ್ಳೆಯ ಗುಣಗಳಿದ್ದರೂ ಇದ್ದ ಕೊರತೆಯೆನೆಂದರೆ, ಅಜಾಗರೂಕತೆಯಿಂದ ಇರುವುದು.

ಅಮ್ಮೈನ್‌ನಿಗೆ ನಿದ್ದೆ ಮಾಡುವುದು ಬಲು ಪ್ರಿಯವಾದ ಕೆಲಸ. ಕೆಲವು ಸಲ ಅವನು ನಿದ್ದೆ ಮಾಡುತ್ತಿದ್ದಾಗ, ಜ್ಞಾನ ಗಳಿಸುವ ಅವಕಾಶಗಳು, ನಿಜವಾದ ನಮ್ರತೆಯನ್ನು ಪ್ರದರ್ಶಿಸುವ ಅವಕಾಶಗಳು ಅಥವಾ ಈಗಾಗಲೇ ಇದ್ದ ಸದ್ಗುಣಗಳಿಗೆ ಹೊಸದೊಂದನ್ನು ಸೇರಿಸುವ ಅವಕಾಶಗಳು ಬಂದು ಹೋಗುತ್ತಿದ್ದವು. ಅವನಿಗೆ ಅವು ಮತ್ತೊಮ್ಮೆ ದೊರೆಯುತ್ತಿರಲಿಲ್ಲ. ಅವನಲ್ಲಿದ್ದ ಸದ್ಗುಣಗಳು ಅವನ ಸ್ವಬಿಂಬದ ಮೇಲೆ ಹೇಗೆ ಅಳಿಸಲಾಗದ ಛಾಪನ್ನೊತ್ತಿದ್ದವೋ ಅಂತೆಯೇ ಅಜಾಗರೂಕತೆಯ ಗುಣವೂ ತನ್ನ ಛಾಪನ್ನೊತ್ತಿತ್ತು.

ಕೊನೆಗೊಂದು ದಿನ ಅಮ್ಮೈನ್ ಸತ್ತುಹೋದ. ಸಾವಿನ ನಂತರ ಸ್ವರ್ಗದ ಬಾಗಿಲುಗಳತ್ತ ಪಯಣಿಸುತ್ತಿರುವಾಗ ಆತ ಅಂತಃವೀಕ್ಷಣೆ ಮಾಡಿಕೊಂಡ. ಸ್ವರ್ಗ ಪ್ರವೇಶಿಸುವ ಅವಕಾಶ ತನಗೆ ಲಭಿಸುತ್ತದೆ ಎಂಬುದಾಗಿ ಅವನಿಗೆ ಅನ್ನಿಸಿತು. ಅವನು ಸ್ವರ್ಗದ ಬಾಗಿಲುಗಳನ್ನು ಸಮೀಪಿಸಿದಾಗ ಅವು ಮುಚ್ಚಿದ್ದವು. ಆಗ ಅವನಿಗೊಂದು ಧ್ವನಿ ಕೇಳಿಸಿತು— ಜಾಗರೂಕನಾಗಿರು, ಸ್ವರ್ಗದ ಬಾಗಿಲುಗಳು ಒಂದು ನೂರು ವರ್ಷಗಳಿಗೊಮ್ಮೆ ಮಾತ್ರ ತೆರೆಯುತ್ತವೆ.

ಅಮ್ಮೈನ್ ಬಾಗಿಲುಗಳು ತೆರೆಯುವ ಕ್ಷಣಕ್ಕಾಗಿ ಕಾಯುತ್ತ ಅಲ್ಲಿಯೇ ಕುಳಿತ. ಸ್ವರ್ಗವನ್ನು ಪ್ರವೇಶಿಸುವ ಅವಕಾಶ ತನ್ನದಾಗುವ ಕ್ಷಣ ಸಮೀಪಿಸುತ್ತಿದೆ ಎಂಬ ಆಲೋಚನೆಯಿಂದ ಅವನು ಉತ್ತೇಜಿತನಾಗಿದ್ದರೂ ಮನುಕುಲಕ್ಕೆ ಒಳಿತನ್ನು ಮಾಡುವ ಅವಕಾಶಗಳಿಂದ ವಂಚಿತನಾದದ್ದು ಅವನಿಗೆ ತುಸು ಬೇಸರವನ್ನು ಉಂಟು ಮಾಡಿತು. ಬಹುಕಾಲ ಬಾಗಿಲುಗಳನ್ನೇ ನೋಡುತ್ತಾ ಕುಳಿತಿದ್ದ ಅವನು, ಅರಿವಿಲ್ಲದೆಯೇ ತೂಕಡಿಸಲು ಆರಂಭಿಸಿದ. ಬಾಗಿಲು ತೆರೆದಾಗ ಶಬ್ದವಾಗಿ ಎಚ್ಚರವಾಗುತ್ತದಲ್ಲ.. ಎನ್ನುವುದು ಅವನ ಆಲೋಚನೆಯಾಗಿತ್ತು. ಆದರೆ ಅವನ ಕಣ್ಣು ರೆಪ್ಪೆಗಳು ಮುಚ್ಚಿದ್ದ ಕ್ಷಣವೊಂದರಲ್ಲಿ ಸ್ವರ್ಗದ ಬಾಗಿಲುಗಳು ತೆರೆದುಕೊಂಡವು. ಅವನು ಅರೆಬರೆ ಎಚ್ಚರಾಗಿದ್ದ. ನಿಧಾನಕ್ಕೆ ಪೂರ್ಣವಾಗಿ ಕಣ್ತೆರೆದು ನೋಡುವಷ್ಟರಲ್ಲಿ ಸತ್ತವರನ್ನೂ ಬಡಿದೆಬ್ಬಿಸುವಷ್ಟು ಜೋರಾದ ಸಪ್ಪಳದೊಂದಿಗೆ ಆ ಬಾಗಿಲುಗಳು ಮುಚ್ಚಿಕೊಂಡವು!

ಅದೃಷ್ಟ ಎನ್ನುವುದನ್ನು ನಂಬಿ ಕೂರಬೇಡಿ. ನಿಮ್ಮ ಪ್ರಯತ್ನಗಳನ್ನು ಮಾಡುತ್ತಲೇ ಇರಿ. ನಿಮ್ಮ ಅದೃಷ್ಟ ಖುಲಾಯಿಸಬೇಕು ಅಂದರೆ, ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳುವ ಶಕ್ತಿ ನಿಮಗಿದೆ ಅನ್ನುವ ಆತ್ಮವಿಶ್ವಾಸ ಬೆಳೆಸಿಕೊಳ್ಳಬೇಕು.

400 ಜನರನ್ನು ಕೂಡಿಸಿಕೊಂಡು ಅದರಲ್ಲಿ ತಮ್ಮನ್ನು ತಾವು ಅದೃಷ್ಟವಂತರು, ಮತ್ತು ದುರದೃಷ್ಟವಂತರು ಎಂದು ಕರೆಸಿಕೊಳ್ಳುವವರನ್ನು ವಿಂಗಡಿಸಿದ ಸಮಾಜ ವಿಜ್ಞಾನಿಗಳು ಅವರೆಲ್ಲರ ಹತ್ತಿರ ಬೇರೆ ಬೇರೆ ರೀತಿಯ ಪ್ರಶ್ನೆಗಳನ್ನು ಕೇಳಿ ಅವರ ಮನಸ್ಥಿತಿಯನ್ನು ಅಧ್ಯಯನ ಮಾಡಿದರು. ಆಗ ಕಂಡು ಬಂದ ಅಂಶಗಳಲ್ಲಿ ಕೆಲವು ಹೀಗಿವೆ:

ಅದೃಷ್ಟ ಅನ್ನೋದು ಹುಟ್ಟಿಂದ ಬರೋವಂಥದ್ದಲ್ಲ ಬದಲಾಗಿ ಮನುಷ್ಯ ಅದನ್ನು ಬೆಳೆಸಿಕೊಳ್ಳೋದು. ಅದೃಷ್ಟ ಇರುವವರು ಏನು ಮಾಡುತ್ತಾರೆಂದರೆ:

★ ಅವಕಾಶಗಳನ್ನು ಗುರುತಿಸಲು ಬೇಕಾದ ಕೌಶಲ್ಯ ಬೆಳೆಸಿಕೊಂಡಿರುತ್ತಾರೆ.
★ ಮನಸ್ಸಿಗೆ ಅನ್ನಿಸೋದನ್ನು ಯಾವುದೇ ಹಿಂಜರಿಕೆ ಇಲ್ಲದೇ ಮಾಡುತ್ತಾರೆ.
★ ಸದಾಕಾಲ ಉತ್ತಮ ಹಾಗೂ ಪಾಸಿಟಿವ್ ಯೋಚನೆಯನ್ನೇ ಮಾಡುತ್ತಾರೆ.
★ ಏನೇ ಕಷ್ಟ ಬಂದರೂ ಸಾಧಿಸುವ ಛಲ ಬೆಳೆಸಿಕೊಂಡಿರುತ್ತಾರೆ.

ಯಾವುದೇ ಭಯ ಪಡದೆ ವಿಭಿನ್ನ ರೀತಿಯ ಜನರನ್ನು ಮಾತನಾಡಿಸಬೇಕು. ಹೀಗೆ ಭೇಟಿ ಮಾಡಿದಾಗ ಇರುವ ಹೊಸ ಅವಕಾಶಗಳ ಅರಿವಾಗುತ್ತದೆ. ಅವರ ಅನುಭವಗಳಿಂದಾಗಿ ಅವಕಾಶಗಳನ್ನು ಹೇಗೆಲ್ಲ ಬಳಸಬಹುದು ಎನ್ನುವುದೂ ಗೊತ್ತಾಗುತ್ತದೆ.

ಅವಕಾಶಗಳ ಇರುವನ್ನು ಸೂಕ್ಷ್ಮವಾಗಿ ಗಮನಿಸಬೇಕು. ಯಾವುದೇ ವಿಷಯ ಅಥವಾ ಸಂದರ್ಭವಾಗಲಿ, ಗಮನವಿಟ್ಟು ನೋಡಬೇಕು. ಹಾಗೆ ಅದರ ಬಗ್ಗೆ ಆಳವಾಗಿ ಅಧ್ಯಯನ ಮಾಡಿದಾಗ. ಅವಕಾಶಗಳನ್ನ ಗುರುತಿಸೋದು ಸುಲಭವಾಗುತ್ತದೆ. ಮೇಲ್ನೋಟಕ್ಕಿಂತ ಆಳವಾಗಿ ನೋಡಿದಾಗ ವಿಷಯ ಅರ್ಥ ಆಗುತ್ತದೆ.

ಒಂದು ವಿಷಯಕ್ಕೆ ಸಂಬಂಧಿಸಿ ಬೇರೆ ಬೇರೆ ಆಯಾಮಗಳಲ್ಲಿ ಯೋಚಿಸಿ ನಿರ್ಧಾರ ತೆಗೆದುಕೊಳ್ಳಿ. ಎಲ್ಲರೂ ಮಾಡಿದಂತೆ ನಾವೂ ಮಾಡಿದರೆ, ಅವರಿಗೂ ನಮಗೂ ವ್ಯತ್ಯಾಸ ಏನೂ ಇಲ್ಲದಂತಾಗುತ್ತದೆ. ನಾವು ಸಾಮಾನ್ಯ ಎನ್ನುವ ಭಾವನೆ ಬರುತ್ತದೆ. ಸ್ಪರ್ಧೆ ಇದ್ದಾಗ ನಾವು ಸ್ವಲ್ಪ ವಿಭಿನ್ನ ಎನ್ನುವುದನ್ನು ಆಯ್ಕೆದಾರರಿಗೆ ಮನದಟ್ಟು ಮಾಡಿಕೊಡಬೇಕು.

ನೀವು ಬಯಸಿದರೂ ಬಯಸದಿದ್ದರೂ ಜೀವನದ ಪಯಣ ಸಾಗುತ್ತಿರುತ್ತದೆ. ಆದರೆ ಅದು ಯಶಸ್ಸಿನತ್ತ ಸಾಗಬೇಕೆಂದರೆ ಅವಕಾಶಗಳನ್ನು ಉತ್ತಮವಾಗಿ ಸದುಪಯೋಗ ಪಡಿಸಿಕೊಳ್ಳಬೇಕು. ಹಾಗೆ ಅನುಭವ ದೊರೆತಾಗ, ಅವಕಾಶಗಳನ್ನು ನಾವೇ ಸೃಷ್ಟಿಸಿಕೊಳ್ಳಲೂ ಸಾಧ್ಯವಾಗುತ್ತದೆ. ಅವಕಾಶಗಳು ನಮ್ಮನ್ನು ಅರಸಿಕೊಂಡು ಬರುತ್ತದೆ ಎಂದು ಕಾಯುವುದರಲ್ಲಿ ಅರ್ಥವಿಲ್ಲ. ಅವಕಾಶಗಳನ್ನು ಹುಡುಕಿಕೊಂಡು ಹೋಗಿ. ಒಂದೆಡೆ ಹೋದಾಗ ಅವಕಾಶಗಳು ಸಿಗಲಿಲ್ಲ ಎಂದಾದರೂ, ಅವಕಾಶಗಳನ್ನು ಹುಡುಕುವ ವಿಧಾನದ ಬಗ್ಗೆಯಾದರೂ ನಮಗೆ ಅರಿವಾಗುತ್ತದೆ. ●